ಮೈಸೂರು ವಿಶ್ವವಿದ್ಯಾನಿಲಯ

(ನ್ಯಾಕ್ ಸಂಸ್ಥೆಯ ಮರುಮಾನ್ಯತೆಯಲ್ಲಿ 'ಎ' ಗ್ರೇಡ್ ಪಡೆದಿದೆ)

(ಎನ್.ಐ.ಆರ್.ಎಫ್-2024: ರಾಜ್ಯ ಸಾರ್ವಜನಿಕ ವಿಶ್ವವಿದ್ಯಾನಿಲಯ ವರ್ಗದಲ್ಲಿ 19ನೇ ಸ್ಥಾನ, ವಿಶ್ವವಿದ್ಯಾನಿಲಯ ವರ್ಗದಲ್ಲಿ 54ನೇ ಸ್ಥಾನ ಮತ್ತು ಒಟ್ಟಾರೆ ವರ್ಗದಲ್ಲಿ 86ನೇ ಸ್ಥಾನ)

ಕುಲಸಚಿವ(ಪರೀಕ್ಷಾಂಗ)ರವರ ಕಛೇರಿ
ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು-570005

ಸಂಖ್ಯೆ: ಪವಿ/7.1/105ಘ/ಇತರೆ/2024-25 ದಿನಾಂಕ:04-01-2025

**ಘಟಿಕೋತ್ಸವಕ್ಕೆ ಬರುವ ಅಭ್ಯರ್ಥಿಗಳಿಗೆ ಸೂಚನೆಗಳು**

ಮೈಸೂರು ವಿಶ್ವವಿದ್ಯಾನಿಲಯದ 105ನೇಯ ವಾರ್ಷಿಕ ಘಟಿಕೋತ್ಸವವನ್ನು ದಿನಾಂಕ **18ನೇ ಜನವರಿ 2025ರ** ಶನಿವಾರ ಪೂರ್ವಾಹ್ನ 10:00 ಘಂಟೆಗೆ ಕ್ರಾಫರ್ಡ್ ಭವನದಲ್ಲಿ ಏರ್ಪಡಿಸಲಾಗಿದೆ. ಖುದ್ದು ಹಾಜರಿಯಲ್ಲಿ ಪದವಿ ಪಡೆಯುತ್ತಿರುವ ಅಭ್ಯರ್ಥಿಗಳು **ದಿನಾಂಕ:16-01-2025ರ ಮತ್ತು ದಿನಾಂಕ:17-01-2025(ಗುರುವಾರ ಮತ್ತು ಶುಕ್ರವಾರ)** ಬೆಳಿಗ್ಗೆ 10:30 ರಿಂದ ಸಂಜೆ 5:30 ಘಂಟೆಯ ಒಳಗೆ ವಿಶ್ವವಿದ್ಯಾನಿಲಯದ ಪರೀಕ್ಷಾಂಗ ಕಛೇರಿ, ಕ್ರಾಫರ್ಡ್ ಭವನ, ಮೈಸೂರು ಇಲ್ಲಿಗೆ ಆಗಮಿಸಿ ಹಾಜರಿ ಪುಸ್ತಕದಲ್ಲಿ ಸಹಿಮಾಡಿ ಪ್ರವೇಶ ಪತ್ರ ಹಾಗೂ ಇತರೆ ಸೂಚನೆಗಳನ್ನು ಪಡೆಯತಕ್ಕದ್ದು.

1. ಪದಕ/ನಗದು ಬಹುಮಾನ ವಿಜೇತರು ಮೊದಲು ಸಾಮಾನ್ಯ ಹಾಜರಿ ಪುಸ್ತಕದಲ್ಲಿ ಹಾಗೂ ಪಾವತಿ ಪುಸ್ತಕದಲ್ಲಿ ಸಹಿ ಮಾಡಬೇಕು ಹಾಗೂ ತಮಗೆ ಪದಕ ಇಲ್ಲವೆ ನಗದು ಬಹುಮಾನ ನೀಡಿಕೆಯ ಬಗ್ಗೆ ಬಂದ ಅಧೀಕೃತ ಪತ್ರವನ್ನು ಸಾದರಪಡಿಸಬೇಕು. ಅಧೀಕೃತ ಪತ್ರ ತಲುಪದಿದ್ದಲ್ಲಿ ಸಂಬಂಧಪಟ್ಟ ಪರೀಕ್ಷೆಯ ಅಂಕಪಟ್ಟಿಯನ್ನು ಪರಿಶೀಲನೆಗೆ ಸಾದರಪಡಿಸಬೇಕಾಗಿ ಕೋರಿದೆ.

   **<u>ಸೂಚನೆ</u>: ಪದಕ/ನಗದು ಬಹುಮಾನ ವಿಜೇತರುಗಳು ಘೋಷಣಾ ಪತ್ರ, ಪೂರ್ವ ದಿನಾಂಕಿತ ರಶೀತಿ, ಫೋಟೋಪ್ರತಿ, ಅಂಕಪಟ್ಟಿ ಮತ್ತು ಭಾವಚಿತ್ರದ ಪ್ರತಿಗಳನ್ನು ದಿನಾಂಕ:8ನೇ ಜನವರಿ 2025 ರೊಳಗೆ ಪರೀಕ್ಷಾ ಶಾಖೆ ಘಟಿಕೋತ್ಸವ ವಿಭಾಗಕ್ಕೆ ತಪ್ಪದೆ ಸಲ್ಲಿಸತಕ್ಕದ್ದು.**

2. ಹಾಜರಿ ಪುಸ್ತಕದಲ್ಲಿ ಸಹಿ ಮಾಡುವ ಸಮಯದಲ್ಲಿ ಅಭ್ಯರ್ಥಿಗಳಿಗೆ ಅಗತ್ಯವಿದ್ದಲ್ಲಿ ವಿವರವಾದ ಮೌಖಿಕ ಸೂಚನೆಗಳನ್ನು ಒದಗಿಸಲಾಗುವುದು.
3. ಘಟಿಕೋತ್ಸವಕ್ಕೆ ಹಾಜರಾಗುವ ಅಭ್ಯರ್ಥಿಗಳು ವಿಶ್ವವಿದ್ಯಾನಿಲಯದ ಅಧಿನಿಯಮಗಳಲ್ಲಿ ನಿಗದಿತವಾದಂತೆ ಈ ಕೆಳಕಂಡ ಉಡುಪುಗಳನ್ನು ಧರಿಸತಕ್ಕದ್ದು.

   **ಘಟಿಕೋತ್ಸವಕ್ಕೆ ಹಾಜರಾಗುವ ಅಭ್ಯರ್ಥಿಗಳು ವಿಶ್ವವಿದ್ಯಾನಿಲಯದ ನಿರ್ಣಯದಂತೆ ಬಿಳಿಯ ವಸ್ತ್ರಗಳನ್ನು ಧರಿಸಬೇಕು. ನಿಗದಿ ಮಾಡಲಾದ ಉಡುಪುಗಳನ್ನು ಧರಿಸದವರಿಗೆ ಘಟಿಕೋತ್ಸವದ ಸಭಾಂಗಣಕ್ಕೆ ಪ್ರವೇಶ ಇರುವುದಿಲ್ಲ.**

4. ಎಲ್ಲಾ ಅಭ್ಯರ್ಥಿಗಳು ಶನಿವಾರ **18-01-2025ರಂದು ಪೂರ್ವಾಹ್ನ 10:00** ಘಂಟೆಗೆ ಮೊದಲು ತಮ್ಮ ತಮ್ಮ ಸ್ಥಾನಗಳಲ್ಲಿ (ಗುರುತಿಸಿರುವಂತೆ)ಕುಳಿತಿರಬೇಕು. ತಡವಾಗಿ ಬರುವವರಿಗೆ ಪ್ರವೇಶವಿಲ್ಲ. ಘನತೆವೆತ್ತ ಕುಲಾಧಿಪತಿಗಳು ಹಾಗೂ ಕರ್ನಾಟಕದ ರಾಜ್ಯಪಾಲರು ಪದವಿ ಪ್ರದಾನ ಮಾಡುವ ಬೆಳಗಿನ ಘಟಿಕೋತ್ಸವ ಸಮಾರಂಭದಲ್ಲಿ ಎಲ್ಲಾ ಪದಕ ಬಹುಮಾನ ವಿಜೇತರರು ಹಾಗೂ ಪದವಿ ಸ್ವೀಕರಿಸುವ ಎಲ್ಲಾ ಅಭ್ಯರ್ಥಿಗಳು ಕಡ್ಡಾಯವಾಗಿ ಆಸೀನರಾಗಿರತಕ್ಕದ್ದು. ಎಲ್ಲಾ ಪಿಹೆಚ್ ಡಿ ಪದವಿಧರರಿಗೆ ಪದಕ ಮತ್ತು ಬಹುಮಾನ ವಿಜೇತರರಿಗೆ ಮಧ್ಯಾಹ್ನ 2:30 ಘಂಟೆಗೆ ಮಾನ್ಯ ಕುಲಪತಿಯವರು ಪ್ರಮಾಣ ಪತ್ರಗಳನ್ನು ಪ್ರದಾನ ಮಾಡುತ್ತಾರೆ.
5. ಘಟಿಕೋತ್ಸವ ಸಭಾಂಗಣಕ್ಕೆ ಮಾನ್ಯ ಕುಲಾಧಿಪತಿಗಳು ಆಗಮಿಸಿದ ನಂತರ ಯಾರಿಗೂ ಪ್ರವೇಶವಿರುವುದಿಲ್ಲ.
6. ಘಟಿಕೋತ್ಸವ ಸಮಾರಂಭ ಸಂಪೂರ್ಣವಾಗಿ ಮುಗಿಯುವವರೆಗೆ ಸಭಾಂಗಣದಿಂದ ಯಾರು ನಿರ್ಗಮಿಸುವಂತಿಲ್ಲ.

**ಸೂಚನೆ:**

1. ಗುರುತಿಗಾಗಿ ದಯವಿಟ್ಟು ಈ ಪತ್ರವನ್ನು ತಪ್ಪದೆ ತರುವುದು.

**ಕುಲಸಚಿವ(ಪರೀಕ್ಷಾಂಗ)**